High Level Causeways

497. Sri V. L. SHIVAPPA (Tiptur).—

Will the Minister for Public Works be pleased to state :—

(*a*) whether the estimate for construction of High Level causeways in the proximity of :

(1) Dharmegowdana Palya ;

(2) Sasalahalli and

(3) Chikkahonnavalli (Honnavalli) has been submitted ;

(*b*) if so, whether sanction has been accorded ;

(*c*) if not, the reasons ?

A.—Sri VEERENDRA PATIL (Minister for Public Works).—

(*a*) No.

(*b*) and (*c*) Does not arise in view of reply to clause (*a*) above.

ಶ್ರೀ ವಿ. ಎಲ್. ಶಿವಪ್ಪ.—ಸ್ವಾಮಿ, ನಾನು ನನ್ನ ಪ್ರಶ್ನೆಯಲ್ಲಿ ಕೇಳಿರತಕ್ಕ ಸ್ಥಳಗಳಲ್ಲಿ ಉಪಚ ನಾವಣೆ ನಡೆಯುವ ಸಂದರ್ಭದಲ್ಲಿ ಈ ಇರಾಖೆಯ ಮಾನ್ಯ ಮಂತ್ರಿಗಳು ದಯ ಮಾಡಿಸಿ ಆ ಪ್ರದೇಶದಲ್ಲಿ ಶತಮಾನಗಳಿಂದ ಆಗತಕ್ಕ ಕೆಲಸಗಳು ಆಗಿಲ್ಲ, ಅಲ್ಲಿ ಬಹಳ ಭಾಗದ ಕೆಲಸಗಳ ಎಸ್ಟಿಮೇಟ್ ತಯಾರು ಆಗುತ್ತಿದೆ. ಆ ಕೆಲಸಗಳನ್ನು ಮಾಡಿಸಿಕೊಡುತ್ತೇನೆ ಎಂದು ಆಶ್ವಾಸನೆ ಕೊಟ್ಟು ಅವರಿಂದ ವೋಟನ್ನು ಕೇಳಿದ್ದಾರೆ. ಈಗ ನೋಡಿದರೆ ಈ ಪ್ರಶ್ನೆಗೆ ಕೊಟ್ಟಿರತಕ್ಕ ಉತ್ತರದಲ್ಲಿ ಆ ಕೆಲಸಗಳ ಎಸ್ಟಿಮೇಟು ತಯಾರಾಗಿಲ್ಲ ಎಂದು ಹೇಳಿದ್ದೀರಿ, ಈಗಲಾದರೂ ತುರ್ತಾಗಿ ಧರ್ಮೇಗೌಡನಪಾಳ್ಯ, ಸಾಲಹಳ್ಳಿ ಮತ್ತು ಚಿಕ್ಕಹೊನ್ನವಳ್ಳಿಗಳ ಸಮೀಪದಲ್ಲಿರುವ ಮೇಲ್ಮಟ್ಟದ ಒಡ್ಡುದಾರಿಗಳನ್ನು ನಿರ್ಮಿಸುವುದಕ್ಕೆ ಸಂಬಂಧಪಟ್ಟ ಎಸ್ಟಿಮೇಟುಗಳನ್ನು ತಯಾರುಮಾಡಿ ಆ ಕೆಲಸಗಳನ್ನು ಮಾಡಿಸಿಕೊಟ್ಟು ಜನಗಳ ಕಷ್ಟವನ್ನು ಪರಿಹಾರಮಾಡುವುದಕ್ಕೆ ಸರ್ಕಾರದವರು ಇಷ್ಟಪಡುತ್ತೀರಾ ?

† ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ಹೇಳಿದಹಾಗೆ ನಾನು ಯಾವ ಭರವಸೆಯನ್ನೂ ಕೊಟ್ಟಿಲ್ಲ. ನಾನು ಆ ಪ್ರದೇಶಕ್ಕೆ ಹೋಗಿದ್ದಾಗ ಇಲ್ಲಿನ ಜನಗಳು ಪಿ. ಡಬ್ಲ್ಯು. ಡಿ. ರೋಡುಗಳು ಇರುವ ಪ್ರದೇಶಗಳನ್ನು ಬಿಟ್ಟು ಇಂಟೀರಿಯರ್ ರೋಡುಗಳಿರುವ ಹಳ್ಳಿಗಳಿಗೆ ನನ್ನನ್ನು ಕರೆದುಕೊಂಡು ಹೋಗಿದ್ದರು. ಈಗಾಗಲೇ ಸಾಸಲಹಳ್ಳಿ ಮತ್ತು ಚಿಕ್ಕಹೊನ್ನವಳ್ಳಿಗಳಿಗೆ ಸಂಬಂಧಪಟ್ಟ ಕೆಲಸಗಳ ಎಸ್ಟಿಮೇಟುಗಳು ತಯಾರಾಗಿವೆ. ಅವು ಇನ್ನೂ ಚೀಫ್ ಇಂಜಿನಿಯರ ಹತ್ತಿರ ಇವೆ. ಅವು ಇನ್ನೂ ನಮಗೆ ಬಂದಿಲ್ಲ. 1968-69ನೆಯ ಸಾಲಿನಲ್ಲಿ ನಾನ್ ಪಿ. ಡಬ್ಲ್ಯು. ಡಿ. ರೋಡುಗಳಿಗೆ ಇರುವಂತಹ ಹಣ ಬಹಳ ಕಡಿಮೆ ಇದೆ. ಸ್ವಲ್ಪ ಮಟ್ಟಿಗೆ ಅದಕ್ಕೆ ಹೆಚ್ಚಿಗೆ ಹಣವನ್ನು ಒದಗಿಸುವುದಕ್ಕೆ ಸಾಧ್ಯವಿದ್ದರೆ ಏನಾದರೂ ಪ್ರಯತ್ನ ಮಾಡುತ್ತೇವೆ.

ಶ್ರೀ ವಿ. ಎಲ್. ಶಿವಪ್ಪ.—ಸ್ವಾಮಿ, ಈ ಕೆಲಸಗಳನ್ನು 1972ನೇ ಇಸವಿಯವರೆಗೂ ತಡೆ ಹಿಡಿದು, 1972ನೇ ಇಸವಿಯಲ್ಲಿ ಮಾಡಿಸಿ ಸಾರ್ವತ್ರಿಕ ಚುನಾವಣೆಯಲ್ಲಿ ಓಟು ಪಡೆಯಬೇಕೆಂದು ನಿಮ್ಮ ಉದ್ದೇಶವೇ ? ಮೊನ್ನೆ ನಡೆದ ಉಪಚುನಾವಣೆಯಲ್ಲಿ ಮಾನ್ಯ ಮಂತ್ರಿಗಳು ಅಲ್ಲಿಗೆ ಹೋಗಿ ಈ ಕೆಲಸಗಳನ್ನು ಮಾಡಿಸಿಕೊಡುತ್ತೇನೆಂದು ಹೇಳಿದ್ದರಿಂದ ಅಲ್ಲಿಯ ಜನರು ಪ್ರಾಮಾಣಿಕವಾಗಿ ಕಾಂಗ್ರೆಸ್‌ಗೆ ಓಟು ಮಾಡಿದ್ದಾರೆ, ಒಂದು ಓಟನ್ನೂ ಸಹ ವಿರೋಧ ಪಕ್ಷಕ್ಕೆ ಕೊಟ್ಟಿಲ್ಲ. ಆದ್ದರಿಂದ ಈ ಕೆಲಸಗಳನ್ನು 1972 ರವರೆಗೆ ಕಾಯದೆ ಜಾಗ್ರತೆ ಮಾಡಿಸುತ್ತೀರಾ ?

9-00 A. M.

ಶ್ರೀ ವೀರೇಂದ್ರ ಪಾಟೀಲ್.—ನಾನು ಯಾರಿಗೂ ಯಾವ ರೀತಿಯ ಆಶ್ವಾಸನೆಯನ್ನೂ ಕೊಟ್ಟಿಲ್ಲ. ಯಾರು ನಮಗೆ ಓಟು ಕೊಟ್ಟಿದ್ದಾರೆಂಬುದು ಸಹ ನನಗೆ ಗೊತ್ತಿಲ್ಲ. ಮಾನ್ಯ ಸದಸ್ಯರ ಕ್ಷೇತ್ರ ಯಾವುದು ಎಂಬುದು ಸಹ ನನಗೆ ಗೊತ್ತಿಲ್ಲ. ಮೊನ್ನೆ ನಡೆದ ಉಪಚುನಾವಣೆಯ ಸಮಯದಲ್ಲಿ ನನ್ನ ಕೆಲವು ಸ್ನೇಹಿತರು ಆ ಕ್ಷೇತ್ರದ ಕೆಲವು ಹಳ್ಳಿಗಳಿಗೆ ಕರೆದು ಕೊಂಡು ಹೋದಾಗ ಅಲ್ಲಿಯ ಜನರು ಕೆಲವು ಕೆಲಸಗಳು ಆಗಬೇಕೆಂದು ಹೇಳಿದ್ದರು. ಈಗ ಹಣದ ಕೊರತೆ ಇರುವುದರಿಂದ, ಹಣದ ಕೊರತೆ ನೀಗಿದಮೇಲೆ ಈ ಕೆಲಸಗಳನ್ನು ತೆಗೆದುಕೊಳ್ಳುವದಕ್ಕೆ ಪ್ರಯತ್ನ ಮಾಡುತ್ತೇನೆಂದು ಹೇಳಿದ್ದೇನೆ.

Industrial Concerns owned by Birlas

481. Sri L. SRIKANTIAH (Nanjangud).—

Will the Minister for Finance, Planning, Commerce and Industries be pleased to state :—

(*a*) the number of Industrial Concerns owned exclusively by the Birlas in the State;

(*b*) the capital invested by them in such industrial concerns belonging to them execlusively ;

(*c*) the number of industrial or commercial undertakings wherein the Birlas are partners owning less than 51 per cent of the shares and owning more than 51 per cent of the shares ;

(*d*) whether the Government made an attempt to purchase following concerns, *viz.*,

(i) C.P.C. Cotton Mills at Nanjangud ;
(ii) the Paper Mills at Nanjangud ;
(iii) the K. R. Mills, Mysore ;
(vi) Hyderabad Cements ;
(v) Electronics, Bangalore ;

before these concerns were purchased by the Birlas or the Birlas took control of these concerns ;

(*e*) the amount invested by the Government in the Birla Concerns in the State and in Industries situated outside the State ?

A.—Sri RAMAKRISHNA HEGDE (Minister for Finance, Planning, Commerce and Industries).—

(*a*) Nil.
(*b*) Does not arise in view of the reply to clause (*a*) above.
(*c*) Less than 51 per cent of the shares : Two, *viz.*,
(i) Mysore Cements, Ltd., Ammasandra.
(ii) Bharat Commerce and Industries Ltd., Nanjangud.
More than 51 per cent of the shares : Nil.